# ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಮಂತ್ರಾಲಯಂ ಪರಿಮಳ ಪ್ರಶಸ್ತಿ ಪುರಸ್ಕಾರದ ಗೌರವ

**ರತ್ನಾಕರವಾಣಿ ಸುದ್ದಿ 27 ,**

ಹುಬ್ಬಳ್ಳಿ : ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರು ಶ್ರೀ ಕ್ಷೇತ್ರ ಮಂತ್ರಾಲಯದ ವತಿಯಿಂದ ಸಾಧಕರಿಗೆ ನೀಡುವ ಅತ್ಯಂತ ಪ್ರತಿಷ್ಠಿತವಾದ 2022-23ನನೇ ಸಾಲಿನ ಮಂತ್ರಾಲಯಂ ಪರಿಮಳ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜನೇವರಿ 25ರ ಬುಧವಾರ ಸಂಜೆ ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಶ್ರೀಕ್ಷೇತ್ರದ ಪೀಠಾಧಿಪತಿಗಳಾದ ಶ್ರೀ ಸುಬುದೇಂದ್ರತೀರ್ಥ ಶ್ರೀಪಾದಂಗಳವರು ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಈ ಪ್ರತಿಷ್ಠಿತ ಪುರಸ್ಕಾರವನ್ನು ಪ್ರದಾನ ಮಾಡಿ ಶ್ರೀ ಗುರು ರಾಘವೇಂದ್ರರ ಆಶೀರ್ವಾದವನ್ನು ಸಮರ್ಪಿಸಿದರು.



ಹೋರಾಟಕ್ಕೆ ಪರ್ಯಾಯ ಹೆಸರೆ ಹೊರಟ್ಟಿ ಎನ್ನುವಂತಹ ನುಡಿ ಕನ್ನಡ ನಾಡಿನೆಲ್ಲೆಡೆ ಪ್ರಚಲಿತದಲ್ಲಿದೆ. ತಮ್ಮ ಅನೇಕ ಹೋರಾಟಗಳ ಮೂಲಕ ಸಭಾಪತಿ ಬಸವರಾಜ ಹೊರಟ್ಟಿಯವರು ಕನ್ನಡ ನಾಡಿನ ಎಲ್ಲ ಶಿಕ್ಷಕರ ಬಾಳನ್ನು ಬೆಳಗಿದ್ದಾರೆ. ಅದರಲ್ಲೂ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಬಗ್ಗೆ, ಅಲ್ಲಿನ ನೌಕರರ ಬಗ್ಗೆ ಹೊರಟ್ಟಿಯವರಿಗೆ ಇನ್ನಿಲ್ಲದ ಪ್ರೀತಿ, ಅಭಿಮಾನ. ಶಿಕ್ಷಕರ ಕೆಲಸಕ್ಕೆ ಮೊದಲ ಆದ್ಯತೆ ನೀಡುವ ವಿಧಾನ ಪರಿಷತ್ತಿನ ಯಾವುದಾದರೂ ಸದಸ್ಯರಿದ್ದರೆ ಅವರು ಬಸವರಾಜ ಹೊರಟ್ಟಿಯವರೆ. ಅವರು ಶಿಕ್ಷಕರನ್ನು ಅದೆಷ್ಟು ಪ್ರೀತಿಸಿ, ಗೌರವಿಸುತ್ತಾರೋ ಅದಕ್ಕಿಂತಲೂ ಮಿಗಿಲಾಗಿ ಕನ್ನಡ ನಾಡಿನ ಶಿಕ್ಷಕ ಬಳಗವು ಬಸವರಾಜ ಹೊರಟ್ಟಿಯವರನ್ನು ಪ್ರೀತಿಸುತ್ತದೆ ಮತ್ತು ಗೌರವಿಸುತ್ತದೆ. ನಾವು ಕೇಳಿ ತಿಳಿದಂತೆ ಹೊರಟ್ಟಿಯವರಿಂದ ಉಪಕೃತರಾದ ಶಿಕ್ಷಕರನೇಕರು ತಮ್ಮ ಮಕ್ಕಳಿಗೆ ಹೊರಟ್ಟಿಯವರ ಹೆಸರನ್ನಿಟ್ಟಿರುವುದು ಅವರ ಕಾರ್ಯಕ್ಷಮತೆಗೆ ಸಂದ ಗೌರವವಾಗಿದೆ ಎಂದು ಶ್ರೀಪಾದಂಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಒಬ್ಬ ವ್ಯಕ್ತಿ ಸತತ ಎಂಟು ಬಾರಿ ವಿಧಾನ ಪರಿಷತ್ತನ್ನು ಪ್ರವೇಶಿಸುವುದು ಸಾಮಾನ್ಯದ ಮಾತಲ್ಲ. ತಮ್ಮ ಮತದಾರರನ್ನು ಅಷ್ಟು ಅವಧಿಗೆ ಹಿಡಿದಿಡುವುದು ಸುಲಭದ ಮಾತೂ ಅಲ್ಲ. ಸರಿಸುಮಾರು ಅರ್ಧ ಶತಮಾನಗಳ ಕಾಲ ಹೊರಟ್ಟಿಯವರು ವಿಧಾನಪರಿಷತ್ತಿನಲ್ಲಿ ಇದ್ದಾರೆ ಎಂದರೆ ಅದಕ್ಕೆ ಕಾರಣ ಅವರ ಕೆಲಸದಲ್ಲಿ ಅವರಿಗಿರುವ ಶ್ರದ್ಧೆ ಮತ್ತು ಪ್ರಾಮಾಣಿಕತೆ. ಯಾವುದೇ ವ್ಯಕ್ತಿ ತನ್ನ ಕಾರ್ಯವನ್ನು ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಮಾಡಿದ್ದಾದರೆ ಎಂತಹ ಎತ್ತರಕ್ಕೇರಬಹುದು ಎಂಬುದಕ್ಕೆ ಬಸವರಾಜ ಹೊರಟ್ಟಿಯವರೇ ಸಾಕ್ಷಿಯಾಗಿದ್ದಾರೆ. ತಾವು ಕೈಗೆತ್ತಿಕೊಂಡಿರುವ ಕಾರ್ಯವನ್ನು ಎಷ್ಟೇ ಕಷ್ಟಗಳು ಎದಿರಾದರೂ ಪೂರ್ಣ ಮಾಡಿ ಮುಗಿಸುವಲ್ಲಿ ಹೊರಟ್ಟಿಯವರಿಗೆ ಹೊರಟ್ಟಿಯವರೇ ಸಾಟಿ ಎಂದು ಶ್ರೀಪಾದಂಗಳವರು ಹೇಳಿದರು.

ಏನಾದರೂ ಸಹಾಯ ಬೇಡಿ ತಮ್ಮ ಬಳಿಗೆ ಬಂದವರನ್ನು ಹೊರಟ್ಟಿಯವರೆಂದಿಗೂ ಬರಿಗೈಲಿ ಕಳಿಸಿದ ಉದಾಹರಣೆಗಳಿಲ್ಲ. ಅವರ ಸಮಸ್ಯೆಯನ್ನು ಅರ್ಥೈಸಿಕೊಂಡು ಬಂದವರ ಮೊಗದಲ್ಲಿ ಮಂದಹಾಸ ಮೂಡಿಸಿಯೆ ಕಳಿಸುವ ಜಾಯಮಾನ ಹೊರಟ್ಟಿಯವರದು. ಅವರ ಬಗ್ಗೆ ಕೇಳಿ ತಿಳಿದು, ನೋಡಿ ಅರಿತು ಶ್ರೀ ಕ್ಷೇತ್ರದ ಈ ಪರಿಮಳಂ ಪ್ರಶಸ್ತಿಯನ್ನು ಅವರಿಗೇ ನೀಡುವುದು ಸೂಕ್ತ ಎಂಬ ಭಾವನೆ ನಮ್ಮಲ್ಲಿ ಮೂಡಿದ್ದರಿಂದ, ಶ್ರೀ ಗುರುರಾಯರೂ ಸಹ ಅದಕ್ಕೆ ನಮ್ಮನ್ನು ಪ್ರೇರೇಪಿಸಿ ಆಶೀರ್ವದಿಸಿರುವದರಿಂದ ಇಂದು ಈ ಪ್ರಶಸ್ತಿಯನ್ನು ಹೊರಟ್ಟಿಯವರಿಗೆ ಪ್ರದಾನ ಮಾಡಲಾಗಿದೆ. ಶ್ರೀ ಗುರುರಾಯರ ಕರುಣೆ, ಆಶೀರ್ವಾದ ಸದಾವಕಾಲ ಅವರ ಮೇಲೆ ಮತ್ತು ಅವರ ಕುಟುಂಬ ವರ್ಗದವರ ಮೇಲೆ ಇದ್ದೇ ಇರುತ್ತದೆ ಎಂದು ಶ್ರೀಪಾದಂಗಳವರು ಆಶೀರ್ವದಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರು ಮೊದಲಿನಿಂದಲೂ ನಾನು ಶ್ರೀ ಗುರು ರಾಯರ ಭಕ್ತನಾಗಿದ್ದೇನೆ. ನನ್ನ ಸಮಾಜಮುಖಿ ಕಾರ್ಯವನ್ನು ಕಂಡು ಇಂದು ಶ್ರೀಮಠದ ವತಿಯಿಂದ ಶ್ರೀ ಸುಬುದೇಂದ್ರತೀರ್ಥ ಶ್ರೀಪಾದಂಗಳವರು ಪ್ರದಾನ ಮಾಡಿದ ಈ ಪ್ರಶಸ್ತಿಯನ್ನು ಸ್ವೀಕರಿಸಿ ಪುನೀತನಾಗಿದ್ದೇನೆ. ನನ್ನ ಜೀವನದ ಕೊನೆಯ ಉಸಿರಿನವರೆಗೂ ಶ್ರೀ ಕ್ಷೇತ್ರದಲ್ಲಿ ಇಂದು ಜರುಗಿದ ಈ ಅಮೃತ ಘಳಿಗೆಯನ್ನು ನಾನೆಂದಿಗೂ ಮರೆಯಲಾರೆ. ಶ್ರೀ ಗುರುರಾಯರ ಕರುಣೆ, ಆಶೀರ್ವಾದ ನನ್ನ ಮೇಲೆ, ನನ್ನ ಕುಟುಂಬ ವರ್ಗದವರ ಮೇಲೆ ಇದ್ದೇ ಇರುತ್ತದೆ ಎನ್ನುವ ಶ್ರೀಪಾದಂಗಳವರ ನುಡಿಗಳು ನನ್ನನ್ನು ವಿನೀತನನ್ನಾಗಿ ಮಾಡಿವೆ. ಈ ಸಂದರ್ಭದಲ್ಲಿ ಶ್ರೀಪಾದಂಗಳವರ ಮೂಲಕ ನಾನು ಶ್ರೀಗುರು ರಾಯರಲ್ಲಿ ಬೇಡುವುದೇನೆಂದರೆ ಗುರುಗಳ ಕರುಣೆ, ಆಶೀರ್ವಾದ ಈ ನಾಡಿನ ಎಲ್ಲ ಜನರ ಮೇಲೂ ಇದ್ದು ಅವರು ಎಲ್ಲ ತೊಂದರೆಗಳಿಂದ ಮುಕ್ತರಾಗಿ ಕ್ಷೇಮದಿಂದ ಇರುವಂತೆ ನಮ್ಮನ್ನು ರಕ್ಷಿಸಲಿ ಎಂದು ಹೊರಟ್ಟಿ ಹೇಳಿದರು.

ಜೀವನದಲ್ಲಿ ಮನುಷ್ಯನಿಗೆ ನೆಮ್ಮದಿ ಇಲ್ಲದಿದ್ದರೆ ಏನಿದ್ದರೇನು? ಇಂದು ಶ್ರೀ ಕ್ಷೇತ್ರದ ಪುಣ್ಯ ಭೂಮಿಗೆ ಬಂದ ತಕ್ಷಣವೆ ನನ್ನ ಆಯಾಸವೆಲ್ಲ ಮಾಯವಾಯಿತು. ಶ್ರೀಕ್ಷೇತ್ರ ಪ್ರವೇಶ ಮಾಡಿದ ಕ್ಷಣದಿಂದ ಏನೋ ಒಂದು ಸಮಾಧಾನದ ಭಾವ ನನ್ನ ಅನುಭವಕ್ಕೆ ಬಂದಿದೆ. ಇಲ್ಲಿನ ಸ್ವಚ್ಛತೆ, ಪರಿಸರವನ್ನು ಕಂಡು ನಾನು ಪುಳಕಿತನಾಗಿದ್ದೇನೆ. ಇಲ್ಲಿನ ಭಕ್ತಿಭಾವ ನನ್ನನ್ನು ಮೂಕವಿಸ್ಮಿತನನ್ನಾಗಿ ಮಾಡಿದೆ. ಇಂದಿನ ಈ ಪ್ರಶಸ್ತಿಯನ್ನು ಸ್ವೀಕರಿಸಿದಾಗಿನಿಂದ ನನ್ನ ಮನದಿಂದ ನನ್ನ ವಯಸ್ಸು ಮಾಯವಾಗಿ ಇನ್ನೂ ಹೆಚ್ಚೆಚ್ಚು ಸಮಾಜಮುಖಿ ಕಾರ್ಯ ಮಾಡುವ ಹುಮ್ಮಸ್ಸು ನನ್ನಲ್ಲಿ ಮೂಡಿದೆ. ಇಲ್ಲಿ ಸಿಕ್ಕಷ್ಟು ಆನಂದ, ನೆಮ್ಮದಿ ನನಗೆ ಬೇರೆಲ್ಲೂ ಸಿಕ್ಕಿಲ್ಲ ಎಂದು ಹೇಳಿ ಶ್ರೀಪಾದಂಗಳವರಿಗೆ ಭಕ್ತಿಪೂರ್ವಕ ಕೃತಜ್ಞತೆಗಳನ್ನು ಸಭಾಪತಿ ಹೊರಟ್ಟಿ ಶ್ರೀಪಾದಂಗಳವರಿಗೆ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಆರ್. ವಿ. ದೇಶಪಾಂಡೆ, ಸಕ್ಕರೆ ಖಾತೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಅವ್ವ ಸೇವಾ ಟ್ರಸ್ಟ್‌ನ ಸಂಚಾಲಕ ಡಾ. ಬಸವರಾಜ ಧಾರವಾಡ, ಕೊಪ್ಪಳದ ಪ್ರಾಣೇಶ ಸೇರಿದಂತೆ ಇನ್ನೂ ಅನೇಕ ಗಣ್ಯರು, ಶ್ರೀಮಠದ ಭಕ್ತಗಣ ಉಪಸ್ಥಿತರಿದ್ದರು.

# ಹೊರಟ್ಟಿಯವರಿಗೆ ಮಂತ್ರಾಲಯದ ಪರಿಮಳಂ ಪುರಸ್ಕಾರ

▸▸ ಮೊದಲನೇ ಪುಟದಿಂದ

ಅದರಲ್ಲೂ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಬಗ್ಗೆ, ಅಲ್ಲಿನ ನೌಕರರ ಬಗ್ಗೆ ಹೊರಟ್ಟಿಯವರಿಗೆ ಇನ್ನಿಲ್ಲದ ಪ್ರೀತಿ, ಅಭಿಮಾನ. ಶಿಕ್ಷಕರ ಕೆಲಸಕ್ಕೆ ಮೊದಲ ಆದ್ಯತೆ ನೀಡುವ ವಿಧಾನ ಪರಿಷತ್ತಿನ ಯಾವುದಾದರೂ ಸದಸ್ಯರಿದ್ದರೆ ಅವರು ಬಸವರಾಜ ಹೊರಟ್ಟಿಯವರೆ. ಅವರು ಶಿಕ್ಷಕರನ್ನು ಅದೆಷ್ಟು ಪ್ರೀತಿಸಿ, ಗೌರವಿಸುತ್ತಾರೋ ಅದಕ್ಕಿಂತಲೂ ಮಿಗಿಲಾಗಿ ಕನ್ನಡ ನಾಡಿನ ಶಿಕ್ಷಕ ಬಳಗವು ಬಸವರಾಜ ಹೊರಟ್ಟಿಯವರನ್ನು ಪ್ರೀತಿಸುತ್ತದೆ ಎಂದು ಶ್ರೀಪಾದಂಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಶ್ರೀ ಗುರುರಾಯರೂ ಸಹ ಅದಕ್ಕೆ ನಮ್ಮನ್ನು ಪ್ರೇರೇಪಿಸಿ ಆಶೀರ್ವದಿಸಿರುವುದರಿಂದ ಈ ಪ್ರಶಸ್ತಿಯನ್ನು ಹೊರಟ್ಟಿಯವರಿಗೆ ಪ್ರದಾನ ಮಾಡಲಾಗಿದೆ. ಶ್ರೀ ಗುರುರಾಯರ ಕರುಣೆ, ಆಶೀರ್ವಾದ ಸದಾಕಾಲ ಅವರ ಮೇಲೆ ಮತ್ತು ಅವರ ಕುಟುಂಬ ವರ್ಗದವರ ಮೇಲೆ ಇದ್ದೇ ಇರುತ್ತದೆ ಎಂದು ಆಶೀರ್ವದಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರು ಮೊದಲಿನಿಂದಲೂ ನಾನು ಶ್ರೀ ಗುರುರಾಯರ ಭಕ್ತನಾಗಿದ್ದೇನೆ. ನನ್ನ ಸಮಾಜಮುಖಿ ಕಾರ್ಯವನ್ನು ಕಂಡು ಇಂದು ಶ್ರೀಮಠದ ವತಿಯಿಂದ ಶ್ರೀ ಸುಬುದೇಂದ್ರತೀರ್ಥ ಶ್ರೀಪಾದಂಗಳವರು ಪ್ರದಾನ ಮಾಡಿದ ಈ ಪ್ರಶಸ್ತಿಯನ್ನು ಸ್ವೀಕರಿಸಿ ಪುನೀತನಾಗಿದ್ದೇನೆ. ನನ್ನ ಜೀವನದ ಕೊನೆಯ ಉಸಿರಿನವರೆಗೂ ಶ್ರೀ ಕ್ಷೇತ್ರದಲ್ಲಿ ಜರುಗಿದ ಈ ಅಮೃತ ಘಳಿಗೆಯನ್ನು ನಾನೆಂದಿಗೂ ಮರೆಯಲಾರೆ. ಗುರುಗಳ ಕರುಣೆ, ಆಶೀರ್ವಾದ ಈ ನಾಡಿನ ಎಲ್ಲ ಜನರ ಮೇಲೂ ಇದ್ದು ಅವರು ಎಲ್ಲ ತೊಂದರೆಗಳಿಂದ ಮುಕ್ತರಾಗಿ ಕ್ಷೇಮದಿಂದ ಇರುವಂತೆ ನಮ್ಮನ್ನು ರಕ್ಷಿಸಲಿ ಎಂದು ಹೇಳಿದರು.

ಇಲ್ಲಿನ ಸ್ವಚ್ಛತೆ, ಪರಿಸರವನ್ನು ಕಂಡು ನಾನು ಪುಳಕಿತನಾಗಿದ್ದೇನೆ. ಇಲ್ಲಿನ ಭಕ್ತಿಭಾವ ನನ್ನನ್ನು ಮೂಕವಿಸ್ಮಿತನನ್ನಾಗಿ ಮಾಡಿದೆ. ಇಂದಿನ ಈ ಪ್ರಶಸ್ತಿಯನ್ನು ಸ್ವೀಕರಿಸಿದಾಗಿನಿಂದ ನನ್ನ ವಯಸ್ಸು ಮಾಯವಾಗಿ ಇನ್ನೂ ಹೆಚ್ಚೆಚ್ಚು ಸಮಾಜಮುಖಿ ಕಾರ್ಯ ಮಾಡುವ ಹುಮ್ಮಸ್ಸು ನನ್ನಲ್ಲಿ ಮೂಡಿದೆ. ಇಲ್ಲಿ ಸಿಕ್ಕಷ್ಟು ಆನಂದ, ನೆಮ್ಮದಿ ನನಗೆ ಬೇರೆಲ್ಲೂ ಸಿಕ್ಕಿಲ್ಲ ಎಂದು ಹೇಳಿ ಶ್ರೀಪಾದಂಗಳವರಿಗೆ ಭಕ್ತಿಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಆರ್. ವಿ. ದೇಶಪಾಂಡೆ, ಸಕ್ಕರೆ ಖಾತೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಅಪ್ಪ ಸೇವಾ ಟ್ರಸ್ಟ್‌ನ ಸಂಚಾಲಕ ಡಾ. ಬಸವರಾಜ ಧಾರವಾಡ ಸೇರಿದಂತೆ ಇನ್ನೂ ಅನೇಕ ಗಣ್ಯರು, ಶ್ರೀಮಠದ ಭಕ್ತಗಣ ಉಪಸ್ಥಿತರಿದ್ದರು.